ಅಧ್ಯಕ್ಷರು.—ನಾನು ಎದ್ದು ನಿಂತಿರುವಾಗ ಮಾನ್ಯ ಸದಸ್ಯರುಗಳು ಕುಳಿತು ಕೊಳ್ಳಬೇಕು. ಮೊದಲು ತಾವು ಅರಿತುಕೊಳ್ಳಬೇಕಾದಂಥ ವಿಭಂದನೆ ಇದು. ಈಗ ಸಂಬಂಧಪಟ್ಟ ವಿಷಯಗಳ ಬಗ್ಗೆ ತಾವು ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಬೇಕು, ಮುಂದೆ ಗೌರ್ನರ್ ಅಡ್ರಸ್ ಚರ್ಚೆಗೆ ಬಂದಾಗ ಮಾತನಾಡಲು ಬೇಕಾದಷ್ಟು ಅವಕಾಶ ಇರುತ್ತದೆ. ಈಗ ನೇರವಾದ ಪ್ರಶ್ನೆ ಕೇಳಿದರೆ ಅವರು ಉತ್ತರ ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್.—ತಮ್ಮನ್ನು ಅಧ್ಯಕ್ಷರು ಎಂದು ಕರೆಯಬೇಕೇ ಅಥವಾ ಅಧ್ಯಕ್ಷಿಣಿಯವರು ಎಂದು ಕರೆಯಬೇಕೇ ?

ಅಧ್ಯಕ್ಷರು.—ಯಾವರೀತಿ ಬೇಕಾದರೂ ಕರೆಯಬಹುದು.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರಲ್ಲಿ ಒಂದು ವಿನಂತಿ. ಈ ಸಭೆಯನ್ನು ಮುಂದಕ್ಕೆ ಹಾಕಿ. ಆಸ್ಪತ್ರೆಯಲ್ಲಿರುವ ಕಾರ್ಮಿಕರನ್ನೂ ಮತ್ತು ಸತ್ತ ಕುಟುಂಬವನ್ನೂ ಹೋಗಿ ನೋಡಿದರೆ ತಮಗೆ ಕಣ್ಣೀರು ಸುರಿಯುತ್ತದೆ ಎಂದು ನನ್ನ ಭಾವನೆ. ಸಾರ್ವಜನಿಕರ ಒಂದು ಕಾರ್ಖಾನೆಯಲ್ಲಿ ಅಂದರೆ ಸರ್ಕಾರವೇ ನಡೆಸತಕ್ಕಂಥ ಈ ಕಾರ್ಖಾನೆಯಲ್ಲಿ ಯಾವುದೇ ವಾದ ವಿವಾದಗಳು ಇದ್ದರೂ ಕಾರ್ಮಿಕರ ದೃಷ್ಟಿಯಿಂದ ಶಾಂತರೀತಿಯಿಂದ ಬಗೆಹರಿಸಬೇಕೇ ವಿನಃ ಇವರು ಮಾಡುವ ತಪ್ಪನ್ನು ಕಾರ್ಮಿಕ ಮುಖಂಡರ ಮೇಲೆ ಗೂಬೆ ಕೂರಿಸುವಂಥ ಪ್ರವೃತ್ತಿಗೆ ಹೋಗಬಾರದು. ಒಂದು ವೇಳೆ ಅವರು ಸತ್ಯಾಗ್ರಹ ನಡೆಸಿದ್ದರೂ ಪೋಲೀಸಿನವರು ಈ ಗೂಂಡಾಗಿರಿಯನ್ನು ನಿಲ್ಲಿಸಿದ್ದರೆ ಇಷ್ಟೊಂದು ರಕ್ತಪಾತ ಆಗುತ್ತಿರಲಿಲ್ಲ. ಈ ರಕ್ತಪಾತದ ಬಟ್ಟೆ ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಮುಖ್ಯ ಮಂತ್ರಿಗಳು ತಾವು ಇದನ್ನು ನೋಡಿ ಎಂದು ಕೈ ಮುಗಿದು ಕೇಳಿಕೊಳ್ಳುತ್ತೇನೆ.

(ತಾವು ತಂದಿದ್ದ ಪೊಟ್ಟಣವನ್ನು ಬಿಚ್ಚಿ ರಕ್ತದ ಕಲೆಯಿದ್ದ ಬಟ್ಟೆಯನ್ನು ಬಿಚ್ಚಿದರು) ಈ ಸರ್ಕಾರಿ ಕಾರ್ಖಾನೆಯ ಕಾರ್ಮಿಕರ ಮೇಲೆ ನಡೆಸಿದಂಥ ಹಲ್ಲೆಯ ಪರಿಣಾಮವಾಗಿ ಕಾರ್ಮಿಕನೊಬ್ಬನ ರಕ್ತದ ಕಲೆಯಿರುವ ಬಟ್ಟೆಯನ್ನು ಕೊಟ್ಟು ಹೋಗುತ್ತೇನೆ. ಇದು ಹೊಸ ಸರ್ಕಾರದ ಪ್ರಥಮ ಕೊಡುಗೆ. ಈ ರಕ್ತಪಾತದ ಬಟ್ಟೆ ನೋಡಿದರೆ ಕಣ್ಣಿನಲ್ಲಿ ರಕ್ತ ಬರುತ್ತದೆ ಮತ್ತು ಅತೀವ ದುಃಖವಾಗುತ್ತದೆ. ನನಗೆ ಅದನ್ನು ನೋಡಲು ಸಾಧ್ಯವಾಗುತ್ತಿಲ್ಲ. ನನಗೆ ಏನು ಮಾತನಾಡುವುದಕ್ಕೂ ಮನಸ್ಸು ಬರುತ್ತಾ ಇಲ್ಲ.

(ನಂತರ ಅವರು ಅಧ್ಯಕ್ಷರ ಬಳಿ ಬಂದು ಅವರ ವೇದಿಕೆ ಮೇಲೆ ರಕ್ತದ ಕಲೆಯಿದ್ದ ಬಟ್ಟೆಯನ್ನು ಇಟ್ಟು ಸಭಾತ್ಯಾಗ ಮಾಡಿದರು).

(ಪ್ರೇಕ್ಷಕರು ಚಪ್ಪಾಳೆ ತಟ್ಟಿದರು)

ಅಧ್ಯಕ್ಷರು.—ಪ್ರೇಕ್ಷಕರು ಇನ್ನೊಮ್ಮೆ ಗ್ಯಾಲರಿಯಲ್ಲಿ ಚಪ್ಪಾಳೆ ತಟ್ಟಕೂಡದು. ಹಾಗೇನಾದರೂ ಮಾಡಿದರೆ ಅವರನ್ನು ಹೊರಗೆ ಕಳುಹಿಸುತ್ತೇವೆ. ಗ್ಯಾಲರಿಯಲ್ಲಿ ಚಪ್ಪಾಳೆ ತಟ್ಟುವ ಶಬ್ದ ಈ ಸಭೆಯಲ್ಲಿ ಕೇಳಕೂಡದು.

†ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಹೇಳಿಕೆ ಮತ್ತು ಶ್ರೀ ವಾಟಾಳ್ ನಾಗರಾಜ್ ಅವರು ಕಾರ್ಮಿಕರಿಗೆ ಆದಂಥ ಗಾಯಗಳು ಮತ್ತು ರಕ್ತದ ಕಲೆಗಳು ಇರತಕ್ಕಂಥ ಬಟ್ಟೆಗಳು ಇವುಗಳನ್ನು ತಮ್ಮ ಅವಗಾಹನೆಗೆ ತಂದಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಷಯವಾದ್ದರಿಂದ ಇದರ ಬಗ್ಗೆ ಒಂದೆರಡು ಕ್ಲಾರಿಫಿಕೇಷನ್ ಮಾತ್ರ ಕೇಳುತ್ತೇನೆ.

ಮೊದಲನೆಯದಾಗಿ ಮಾನ್ಯ ಸಚಿವರು ನೀಡಿರುವ ಹೇಳಿಕೆಯಲ್ಲಿ ಲಾಠಿ ಛಾರ್ಜು ಮತ್ತು ಟಿಯರ್‌ಗ್ಯಾಸ್ ಪ್ರಯೋಗ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಾನು ಆ ಕಾರ್ಖಾನೆಯ ಒಬ್ಬ ಕಾರ್ಮಿಕನ ಸಾವಿನ ಬಗ್ಗೆ ಕೇಳುತ್ತೇನೆ. ಇದರ ಬಗ್ಗೆ ಪೋಸ್ಟ್ ಮಾರ್ಟಂ ರಿಪೋರ್ಟ್ ಬರದೇ ಆತನು ನ್ಯಾಚುರಲ್ ಡೆತ್‌ನಿಂದ ಸತ್ತ ಎಂದು ಹೇಳುವುದು ನಾನು ಒಪ್ಪುವುದಿಲ್ಲ. ಆದುದರಿಂದ ಅವರು ಏನು ಹೇಳಿದ್ದಾರೆ. ನ್ಯಾಚುರಲ್ ಡೆತ್‌ನಿಂದ ಸತ್ತ ಎಂದು ಹೇಳುವುದು ತಪ್ಪು. ಪೋಸ್ಟ್ ಮಾರ್ಟಂ ರಿಪೋರ್ಟ್ ಬಂದಿದ್ದರೆ ಅದನ್ನು ಒಪ್ಪಬಹುದಾಗಿತ್ತು. ಈಗ ಅವರ ಹೇಳಿಕೆ ಪ್ರಕಾರದ್ವಂದ್ವ ಅಭಿಪ್ರಾಯಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಆದುದರಿಂದ ಕಾರ್ಮಿಕನ ಸಾವಿನ ಬಗ್ಗೆ ಸರಿಯಾದ ಒಂದು ಉತ್ತರ ಕೊಡಬೇಕು ಎಂದು ಕೇಳುತ್ತೇನೆ.